# ಡವ್‌ಕಾಟ್

ಪಾರಿವಾಳಗಳು ಈ 'ಅಂಚೆ ಮನೆ'ಗೆ ಬಂದು ತಮ್ಮ ಕಾಲುಗಳಲ್ಲಿ ಅಂಚೆಪತ್ರಗಳನ್ನು ಕಟ್ಟಿಸಿಕೊಳ್ಳುತ್ತಿದ್ದವು.

■ ರಮೇಶ ಕಂಚೇಪುರ





ಬ್ರಿಟಿಷರು ಭಾರತಕ್ಕೆ ಬರುವ ಮುಂಚೆ ರಾಜಮನೆತನಗಳ ಆಳ್ವಿಕೆ ಕಾಲದಲ್ಲಿ ಪತ್ರಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ರವಾನಿಸಲು ಪಾರಿವಾಳಗಳನ್ನು ಬಳಸಲಾಗುತ್ತಿತ್ತು. ಆಧುನಿಕ ಅಂಚೆ ವ್ಯವಸ್ಥೆ ಇಲ್ಲದ ಆ ಕಾಲದಲ್ಲಿ ಈ ಪಾರಿವಾಳಗಳೇ ಇಂದಿನ 'ಪೋಸ್ಟ್‌ಮನ್'ನಂತೆ ಊರು ಅಲೆದು ಪತ್ರ ತಲುಪಿಸುವ ಕೆಲಸ ಮಾಡುತ್ತಿದ್ದವು.

ಹಾಗಾಗಿ ಇವುಗಳಿಗೆ ಒಂದು 'ಕಚೇರಿ' ಇರುತ್ತಿತ್ತು! ಇಲ್ಲಿ ಪಾರಿವಾಳಗಳೇ ಪೋಸ್ಟ್‌ಮನ್‌ಗಳು, ಪತ್ರಗಳನ್ನು ವಿಂಗಡಿಸಿ ಅವುಗಳ ಕಾಲಿಗೆ ಕಟ್ಟುವ, ಕೊಕ್ಕಿಗೆ ಅಥವಾ ಕುತ್ತಿಗೆಗೆ ಸಿಕ್ಕಿಸುವ ಅಧಿಕಾರಿಯೇ 'ಪೋಸ್ಟ್‌ಮಾಸ್ಟರ್' ಆಗಿರುತ್ತಿದ್ದರು, ಈ ಕಾರ್ಯಾಲಯಗಳನ್ನು 'ಡವ್‌ಕಾಟ್'ಗಳೆಂದು ಕರೆಯುತ್ತಿದ್ದರು.

ಹಾಂ, ಇದು ಪಾರಿವಾಳಗಳ ಕಚೇರಿ ಅಲ್ಲ. ಅವುಗಳ ಬರುವಿಕೆ, ಹೋಗುವಿಕೆ ಮತ್ತು ತಂಗಲು ಇರುವ ಜಾಗ. ಇಲ್ಲೇ ಪತ್ರವನ್ನು ಅವುಗಳಿಗೆ ಕಟ್ಟುವ ಕೆಲಸವನ್ನೂ ಮಾಡಲಾಗುತ್ತಿತ್ತು. ಇಂತಹ ಡವ್‌ಕಾಟ್‌ಗಳು ಇಂದು ವೀಕ್ಷಿಸಲು ಕೂಡ ಇಲ್ಲದಂತಾಗಿವೆ. ಆಧುನೀಕರಣದ ಭರಾಟೆಯಲ್ಲಿ ನಾಶವಾಗಿವೆ.

ಆದರೆ, ಬೆಂಗಳೂರಿನ ಲಾಲ್‌ಬಾಗ್ ಹೂತೋಟದ ಒಳಗೆ ನಮಗೆ ಇಂತಹ 'ಡವ್‌ಕಾಟ್' ನೋಡುವ ಅವಕಾಶ ಸಿಗುತ್ತದೆ. ಶತಮಾನಗಳಷ್ಟು ಹಿಂದೆ ಈ ಡವ್‌ಕಾಟ್ ನಿರ್ಮಿಸಿರಬಹುದು, ಬ್ರಿಟಿಷರ ಕೈಗೆ ತೋಟ ಬಂದ ಬಳಿಕ ಅವರು ಮತ್ತಷ್ಟು ಪರಿಷ್ಕರಿಸಿರಬಹುದು ಎಂದು ಇಲ್ಲಿನ ಸಿಬ್ಬಂದಿಯೊಬ್ಬರು ಹೇಳುತ್ತಾರೆ. ಇಂದು ಈ ಡವ್‌ಕಾಟ್, ಲಾಲ್‌ಬಾಗ್ ನಿರ್ವಹಣೆಯ ಸಲಕರಣೆಗಳನ್ನು ಶೇಖರಿಸುವ ಕೊಠಡಿಯಾಗಿ ಮಾರ್ಪಟ್ಟಿದೆ. ಅದರ ಬಾಹ್ಯ ಸೌಂದರ್ಯ ಹಾಗೆಯೇ ಇದೆ. ಅಂದು ನೂರಾರು ಪಾರಿವಾಳಗಳನ್ನು ಬಳಸಿಕೊಳ್ಳಲಾಗುತ್ತಿತ್ತು. ಸ್ಥಳೀಯ ಸಂಚಾರ, ಹೊರನಾಡುಗಳು, ರಾಷ್ಟ್ರೀಯ– ಮುಂತಾದ 3–4 ಬಗೆಯ ಪಾರಿವಾಳಗಳು ಅಲ್ಲಿರುತ್ತಿದ್ದುವು. ಈ 'ಡವ್‌ಕಾಟ್'ನಲ್ಲಿ ಇಂದಿಗೂ ಪಾರಿವಾಳಗಳ ಸಂಚಾರ ಕ್ರಮಕ್ಕೆ ಅನುಸರಿಸಿ ಹಂತ ಹಂತಗಳಲ್ಲಿ ಪ್ರವೇಶದ್ವಾರ ಇರುವುದನ್ನು ಕಾಣಬಹುದು.

ಬ್ರಿಟಿಷರ ಆಗಮನದ ನಂತರ ಅಂಚೆ ವ್ಯವಸ್ಥೆ ಬೆಳಕಿಗೆ ಬಂದ ನಂತರ ವಾಹನಗಳಲ್ಲಿ ಪತ್ರಗಳನ್ನು ಕಳುಹಿಸಿ, ಆ ಊರಿನ ಅಂಚೆ ಕಚೇರಿಗೆ ತಲುಪಿಸುವ ಪದ್ಧತಿ ಬೆಳೆದು ಬಂತು. ಆ ಪತ್ರಗಳನ್ನು ಅಂಚೆ ಕಚೇರಿ ಸಿಬ್ಬಂದಿ ಸಂಬಂಧಿಸಿದವರಿಗೆ ತಲುಪಿಸುವ ಕ್ರಮ ಮುಂದುವರೆಯಿತು. ಹೀಗೆ ಡವ್‌ಕಾಟ್‌ಗಳು ಕಣ್ಮರೆಯಾದವು.

ಇಂದು ತಂತ್ರಜ್ಞಾನ ಬೆಳವಣಿಗೆಯಿಂದಾಗಿ ಪತ್ರ ವ್ಯವಹಾರ ಕಡಿಮೆಯಾಗಿದೆ. ಇ–ಮೇಲ್, ಮೊಬೈಲ್ ಮೂಲಕ ಸಂದೇಶ ರವಾನಿಸುವ ಪದ್ಧತಿ ರೂಢಿಯಾಗಿದೆ. ಇನ್ನೂ ಪಾರಿವಾಳಗಳಿಗೇನು ಕೆಲಸ? ಹಾಗೆಯೇ ಡವ್‌ಕಾಟ್ ಕೂಡ ಈಗ ನೆನಪು ಮಾತ್ರ.